ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿದ ಮೇಲೆ ಆ post ಗಳಿಗೆ ಬಂದಂಥವರು specialist Doctors. Specialist Doctors ಯಾರೂ ಗುತ್ತಿಗೆ ಆಧಾರದ ಮೇಲೆ ಬಂದು ಆಸ್ಪತ್ರೆಯಲ್ಲಿ ಕೆಲಸ ಮಾಡುವುದಿಲ್ಲ. ಅದನ್ನು ಸರ್ಕಾರವೇ ನೇಮಕಾತಿ ಮಾಡಬೇಕಾಗುತ್ತದೆ. ಅಲ್ಲಿ ಬರುವಂಥವರು ಆಯುರ್ವೇದಿಕ್ ಅಥವಾ B.A.M.S. Doctor ಬರುತ್ತಾರೆ. ಆಯುರ್ವೇದಿಕ್ Doctors injection ಮಾಡುವ ಹಾಗಿಲ್ಲ. Post-mortem ಮಾಡುವ ಹಾಗಿಲ್ಲ. ಹಾಗಾಗಿ ಕೆಲಸ ಕುಂಟಿತವಾಗುತ್ತದೆ. ಆದ್ದರಿಂದ ನೇರ ನೇಮಕಾತಿ ಮಾಡಿಕೊಂಡು ಇಲ್ಲಿಗೆ ವೈದ್ಯಾಧಿಕಾರಿಗಳನ್ನು ನೇಮಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಆ 500 ಜನ ಏನು ನೇರ ನೇಮಕಾತಿ ಮಾಡಬೇಕೆಂದಿದ್ದೇವೆ, ಆ ನೇಮಕಾತಿಯಲ್ಲಿ ಸದರಿ ಆಸ್ಪತ್ರೆಗೆ ಬೇಕಾದಂಥ ಸಿಬ್ಬಂದಿ ಮತ್ತು ವೈದ್ಯರ ಕೊರತೆಯನ್ನು ನಾವು ಸರಿಪಡಿಸುತ್ತೇವೆ.

ಹಿಂದುಳಿದ ಗಡಿ ಪ್ರದೇಶಗಳಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ

178 (906) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಾದ್ಯಂತ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವು ಸೇರಿದಂತೆ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆಸ್ಪತ್ರೆಗಳು ಎಷ್ಟು?

ಆ) ಸದರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವೈದ್ಯರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 7 ಜಿಲ್ಲಾ ಆಸ್ಪತ್ರೆಗಳು 45 ತಾಲ್ಲೂಕು ಆಸ್ಪತ್ರೆಗಳು ಹಾಗೂ 501 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ಹೌದು.

ಇ) ಸಾಮಾನ್ಯ ವೈದ್ಯರುಗಳ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಕರಡು ಅಧಿಸೂಚನೆಯನ್ನು ದಿ: 15-05-06ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರವರೆ, ಈ ಉತ್ತರವನ್ನು ನೋಡಿ ನನಗೇನೂ ತೃಪ್ತಿಯಾಗಿಲ್ಲ. ನಾನು ಅವರ ಬಗ್ಗೆ ಬಹಳ ಗೌರವವನ್ನಿಟ್ಟುಕೊಂಡಿರುವ ಮನುಷ್ಯ. ಇಷ್ಟಿದ್ದರೂ ಅವರ ಕಾರ್ಯಾಲಯದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದೆ. ನಮ್ಮ ಜಿಲ್ಲೆಯ ಆಸ್ಪತ್ರೆಗಳಿಗೆ

ವೈದ್ಯರುಗಳನ್ನು ಕೊಡಿ ಎಂದು ಕೇಳಿದ್ದಾಯಿತು. ವೈದ್ಯರುಗಳೆಲ್ಲ ಅಲ್ಲಿಗೆ ಹೋಗಬೇಕೆಂದು ಇವರು ಬರೆದರು. ಮಾನ್ಯ ಸಚಿವರ ಬರವಣಿಗೆಗೆ ಆ ವೈದ್ಯರುಗಳು ಅಲ್ಲಿಗೆ ಹೋಗಲೇ ಇಲ್ಲ. ಅಲ್ಲಿ ವೈದ್ಯರುಗಳೇ ಇಲ್ಲ. ಅಲ್ಲಿ ಸಾರ್ವಜನಿಕರಿಗೆ ನಾಯಿ ಕಚ್ಚಿದರೆ ಅದಕ್ಕೆ ಔಷಧಿ ಕೊಡುವ ವೈದ್ಯರಿಲ್ಲ, ಕತ್ತೆ ಕಡಿದರೆ ಇಲ್ಲ, ಹಾವು ಕಡಿದರೆ ಇಲ್ಲ, ಕಿರುಬ ಕಡಿದರೆ ಇಲ್ಲ, ಅದೊಂದು ತರಹ ಬೇವರ್ಸಿ ಆಸ್ಪತ್ರೆ ಆದ ಹಾಗಿ ಆಗಿದೆ. ಪ್ರತಿದಿನ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಕಷ್ಟ ತಡೆದುಕೊಳ್ಳುವುದಕ್ಕಾಗುವುದಿಲ್ಲ. ಸ್ಪಷ್ಟವಾದ ಉತ್ತರವನ್ನು ತಾವು ನೀಡಬೇಕು. ಇಲ್ಲವೆಂದರೆ ನಾನು ಇಡೀ ರಾತ್ರಿ ಇಲ್ಲಿಯೇ ಮಲಗಿಕೊಳ್ಳುತ್ತೇನೆ. ಅಲ್ಲಿಗೆ ಡಾಕ್ಟರುಗಳನ್ನು ಏಕೆ ನೇಮಕ ಮಾಡುತ್ತಿಲ್ಲ? ಇದರ ಉದ್ದೇಶವೇನು? ಚಾಮರಾಜನಗರಕ್ಕೆ ಈ ಪರಿಸ್ಥಿತಿ ಏಕೆ? ಪ್ರತಿದಿನ ಆ ರೋಗಿಗಳ ಕಷ್ಟ ನೋಡುವುದಕ್ಕಾಗುತ್ತಿಲ್ಲ. ಅಲ್ಲಿ ಔಷಧಿ ಕೊಡುವವರಿಲ್ಲ. ವೈದ್ಯರಿಲ್ಲ. ನೀರಿಲ್ಲ. ವಾಹನಗಳು ಕೆಟ್ಟಿವೆ. ಈ ಪರಿಸ್ಥಿತಿ ಅಲ್ಲಿದೆ.

ಮಾನ್ಯ ಸದಸ್ಯರೊಬ್ಬರು : ಅಲ್ಲಿಗೆ ಮುಖ್ಯಮಂತ್ರಿಯವರು ಬಂದರೆ ಎಲ್ಲ ಸರಿಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಬಹಳ ಬುದ್ಧಿವಂತಿಕೆಯಿಂದ ಮುಖ್ಯಮಂತ್ರಿಗಳನ್ನು ಹೇಗೆ ಅಧಿಕಾರದಿಂದ ಇಳಿಸಬೇಕೆನ್ನುವ ಏನೋ ಒಂದು ಪಿತೂರಿ ಇವರದ್ದಿರಬೇಕು. ವಿಷಯಕ್ಕೆ ಬರುವುದಾದರೆ ಮಾನ್ಯ ಆರೋಗ್ಯ ಸಚಿವರೇ, ನಾನು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಬೇಕೆಂದು ಅತ್ಯಂತ ನೋವಿನಿಂದ ನಾನು ಹೇಳುತ್ತಿದ್ದೇನೆ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ರಾತ್ರಿಯೆಲ್ಲ ಇಲ್ಲಿ ಮಲಗಿದರೆ ಶ್ರೀ ರಮೇಶ್‌ಕುಮಾರ್‌ರವರು ಅವರ ಮನೆಗೆ Phone ಮಾಡುತ್ತಾರೆ. ನೀವು ಬರಲಿಲ್ಲವೆಂದು ಎಲ್ಲೋ ಬಂದು ಮಲಗಿದ್ದಾರೆಂದು ಅವರು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಕಾದರೆ ಕಡತ ತೆಗೆಯಿರಿ. ಅವರೇ ಒಪ್ಪಿಕೊಂಡರು. ಅದೇನೆಂದರೆ, ಚಾಮರಾಜ ನಗರಕ್ಕೆ ಯಾರೇ ಮುಖ್ಯಮಂತ್ರಿಗಳು ಬಂದರೂ ಕೂಡ ಅಧಿಕಾರ ಕಳೆದುಕೊಳ್ಳುತ್ತಾರೆನ್ನುವುದನ್ನು ಒಪ್ಪಿದರು. ಅದಕ್ಕೆ ನೀವು ಆ ರೀತಿಯಾಗಿ ಒಪ್ಪಿದರೆ, ಯಾರಿಗೆ ನೀವು ಪ್ರತಿನಿಧಿತ್ವ ಮಾಡುತ್ತಿದ್ದೀರಿ ಅವರಿಗೆ ಅವಮಾನವಾಗುತ್ತದೆ. ಆದ್ದರಿಂದ ದಯವಿಟ್ಟು ಅದನ್ನು .....

ಶ್ರೀ ವಾಟಾಳ್ ನಾಗರಾಜ್ : ಏನಾಗಿದೆಯೆಂದರೆ, ಬಹಳ ಬುದ್ಧಿವಂತಿಕೆಯಿಂದ ಚಾಮರಾಜನಗರದ ಮೇಲೆ ಕೆಟ್ಟ ಹೆಸರು ತರುವುದಕ್ಕೆ ಮುಖ್ಯಮಂತ್ರಿ ಕಳುಹಿಸಿ ಮುಖ್ಯಮಂತ್ರಿ ಕಳುಹಿಸಿ ಎಂದು ಹೇಳುವುದಾದರೆ, ಮುಖ್ಯಮಂತ್ರಿಗಳು ಬಂದುಬಿಟ್ಟರೆ ಏನಾಗುತ್ತದೆ? ನಾನು ಅದಕ್ಕೆ ಒಪ್ಪಿಲ್ಲ. ಅದಕ್ಕೆ ನಾನು ನಿನ್ನೆ ಕೇಳಿದೆ, ಮುಖ್ಯಮಂತ್ರಿಗಳು ಬರುವುದಿಲ್ಲ ತಾನೆ? ಬರುವುದು ಬೇಡ. ಮಂತ್ರಿಗಳು ಬರುವುದಿಲ್ಲ ತಾನೆ? ಬರುವುದು ಬೇಡ. ನಮ್ಮ ಚಾಮರಾಜನಗರವೇ ಒಂದು ರಾಜ್ಯವಾಗಿ ನಿರ್ಮಾಣವಾಗಲಿ. ನಾನು ರಾಜ್ಯವನ್ನು ಒಡೆಯಬೇಕೆಂದು ಹೇಳುತ್ತಿಲ್ಲ. ಯಾರು ಏನೇ

ಹೇಳಲಿ ರಾಜ್ಯವನ್ನು ಎರಡು ಭಾಗ ಮಾಡುವುದಕ್ಕೆ ನಾನು ಮೊದಲಿನಿಂದಲೂ ವಿರೋಧವಾಗಿದ್ದೇನೆ. ಈ ಪರಿಸ್ಥಿತಿ ಇರುವುದರಿಂದ ಅನ್ಯಮಾರ್ಗವಿಲ್ಲದೆ ಚಾಮರಾಜನಗರವನ್ನೇ ಒಂದು ರಾಜ್ಯವನ್ನಾಗಿ ಮಾಡಿ. ಅದರಲ್ಲೇನೂ ನನ್ನ ಅಭ್ಯಂತರವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜೆ.ಹೆಚ್. ಪಟೇಲರನ್ನು ಇಷ್ಟೊಂದು ಹೊಗಳಿದ್ದಿರಲ್ಲಾ! ಜೆ.ಹೆಚ್. ಪಟೇಲರೂ ಕೂಡ rationalist ಎಂದು ನಿಮಗೆಲ್ಲರಿಗೂ ಗೊತ್ತಿತ್ತು. ಅಂತ rationalist ಮುಖ್ಯಮಂತ್ರಿ ಕೂಡ ಅವರ ಮಾತಿಗೆ ಬೆಲೆ ಕೊಡಲಿಲ್ಲ. ಮಹದೇಶ್ವರ ಬೆಟ್ಟದಲ್ಲಿ ಹೋಗಿ ಜಿಲ್ಲೆಯನ್ನು declare ಮಾಡಿಕೊಂಡು ಬಂದಂಥವರಿಗೆ ಈ ರೀತಿಯಾಗಿ ಮಾತನಾಡುವುದಕ್ಕೆ ನೈತಿಕ ಹಕ್ಕು ಏನಿದೆ?

ಶ್ರೀ ವಾಟಾಳ್ ನಾಗರಾಜ್ : ನೂರಕ್ಕೆ ನೂರು ನಾನು ಮಾತನಾಡುವುದಕ್ಕೆ ನನಗೆ ಹಕ್ಕಿದೆ. ನಮ್ಮ ಊರಿಗೆ ಬನ್ನಿ ಎಂದು ಮಾನ್ಯ ಖರ್ಗೆಯವರನ್ನು ನಾವು ಕರೆದಿರಲಿಲ್ಲವೇ? ಕೇಳಿ. ಅವರು ನಮ್ಮ ಊರಿಗೆ ಬಂದಿರಲಿಲ್ಲವೇ? ಎಷ್ಟು ವೈಭವವಾಗಿತ್ತು.

ಛೇರ್ಮನ್ : ಅದನ್ನು ಬೇರೆ ರಾಜ್ಯವನ್ನಾಗಿ ಮಾಡಿ ಇವರೇ ಮುಖ್ಯಮಂತ್ರಿಯಾಗಿ ಆ ಮೇಲೆ ಇವರೂ ಕೂಡ ಊರು ಬಿಡಬೇಕಲ್ಲಾ ಆಗ ಇವರು ಹೋಗುವ ಹಾಗಿಲ್ಲ.

(ಅಡಚಣೆ)

ಶ್ರೀಮತಿ ಸುನಿತಾ ವೀರಪ್ಪಗೌಡ : ಮಾನ್ಯ ಛೇರ್ಮನ್‌ರವರೆ, ನಮ್ಮ ಕ್ಷೇತ್ರದಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳಿಲ್ಲ. ಜೊತೆಗೆ ಈ transfer time ನಲ್ಲಿ ಕಾವೇರಿಪುರ, ಬ್ಯಾಟರಾಯನಪುರ ಮತ್ತು ಬನ್ನೂರು ಹೀಗೆ ನನ್ನ ಕ್ಷೇತ್ರದಲ್ಲಿರುವ ಎಲ್ಲಾ ಡಾಕ್ಟರುಗಳು ಹೊರಟುಹೋಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಹಳ್ಳಿಗಳಲ್ಲಿ ಈಗ ಎಲ್ಲರಿಗೂ ಜ್ವರ ಪ್ರಾರಂಭವಾಗಿದೆ. ಡಾಕ್ಟರುಗಳು ಇಲ್ಲದೆ ತುಂಬಾ ತೊಂದರೆಯಾಗಿದೆ. ಜೊತೆಗೆ ಸರಿಯಾಗಿ ದಾದಿಯರೂ ಸಹ ಇಲ್ಲ. ಕಳೆದ 20 ತಿಂಗಳಿನಿಂದ ಈ ಬಗ್ಗೆ ಸದನದಲ್ಲಿ ಕೇಳಿಕೊಳ್ಳುತ್ತಲೇ ಇದ್ದೇನೆ. ಆದರೆ ಈ ಸಮಸ್ಯೆಯನ್ನು ಪರಿಹಾರ ಮಾಡಲೇ ಇಲ್ಲ. ದಯಮಾಡಿ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಛೇರ್ಮನ್‌ರವರೇ, ನಾನು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಒಂದೇ ತಾಲ್ಲೂಕಿನವರಾಗಿದ್ದು ಇಬ್ಬರು ಎಂಎಲ್‌ಎ ಇದ್ದೇವೆ. ಈಗ ಅವರು ಹೊಸ ಸರ್ಕಾರ ಎಂದು ಹೇಳಿದ್ದಾರೆ. ನಮ್ಮ ಚಾಮರಾಜನಗರ ಜಿಲ್ಲೆ ಒಂದು ರಾಜ್ಯವಾದರೆ ಅವರು ಮುಖ್ಯಮಂತ್ರಿ ಮತ್ತು ನಾನು ಉಪ ಮುಖ್ಯಮಂತ್ರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರು ಎಷ್ಟು ಸಂತೋಷವಾಗಿ ಹೇಳಿದರು. ಅದನ್ನು ತೀವ್ರವಾಗಿ ಸ್ವಾಗತ ಮಾಡುತ್ತೇನೆ. ಇವತ್ತು ನಾವು ಹೋಗಿ ಬೇರೆ ರಾಜ್ಯವನ್ನಾಗಿ ಮಾಡಿಕೊಳ್ಳೋಣ.

ಶ್ರೀ ಆರ್. ಧ್ರುವನಾರಾಯಣ : ಚಾಮರಾಜನಗರದ ಜಿಲ್ಲಾ ಆಸ್ಪತ್ರೆಯೂ ನಿಜವಾಗಿಯೂ ಕೂಡ ಶೋಚನೀಯವಾಗಿದೆ. ಏಕೆಂದರೆ, ಪ್ರತಿ ದಿವಸ ನಾವು ರಾತ್ರಿ ಅಧಿವೇಶನ ಮುಗಿಸಿಕೊಂಡು ನಿನ್ನೆಯೂ ಕೂಡ ರಾತ್ರಿ ಈ ಟಿ.ವಿ. ಮತ್ತು ಉದಯ ಟಿ.ವಿ. ಯಲ್ಲಿ ಆಸ್ಪತ್ರೆಯ ಬಗ್ಗೆ ತೋರಿಸಿದ್ದಾರೆ. ಅಲ್ಲಿ ಬಹಳಷ್ಟು ಸಮಸ್ಯೆಗಳು ಇದೆ. ಅಲ್ಲಿ ಡಾಕ್ಟರ್ಸ್‌ಗಳ ಕೊರತೆಯಂತೂ ಕೂಡ ತುಂಬಾ ಇದೆ. ಏಕೆಂದರೆ ಚಾಮರಾಜನಗರ ಜಿಲ್ಲೆಯಾಗಿದೆ. ತಾಲ್ಲೂಕು ಮಟ್ಟದ ಆಸ್ಪತ್ರೆ ಮೇಲ್ದರ್ಜೆಗೇರಿಸಬೇಕು, ಅದನ್ನು ಮೇಲ್ದರ್ಜೆಗೆ ಏರಿಸಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಡಾಕ್ಟರ್ಸ್‌ಗಳು ಇರುವುದಿಲ್ಲ. ದಯಮಾಡಿ ಇದರ ಬಗ್ಗೆ ಮಾಡಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರು ಅವರ ಕೊಠಡಿಯ ಮುಂದೆ ಹೋಗಿ ಚಳುವಳಿಯನ್ನು ಮಾಡಿದರು. ಅದು ಟಿ.ವಿ.ಯಲ್ಲೂ ಕೂಡ ಪ್ರಸಾರವಾಯಿತು. ಅವತ್ತು ಮಾನ್ಯ ಸಚಿವರಾದ ಅಶೋಕ್‌ರವರು ನಿಮ್ಮ ಜಿಲ್ಲಾ ಆಸ್ಪತ್ರೆಗೆ ಡಾಕ್ಟರ್‌ಗಳನ್ನು ನೇಮಕ ಮಾಡಿದ್ದೇವೆಂದು ಅನೌನ್ಸ್ ಮಾಡಿದರು. ಇದುವರೆವಿಗೂ ಕೂಡ ಅಲ್ಲಿಗೆ ಡಾಕ್ಟರ್‌ಗಳು ಬಂದಿರುವುದಿಲ್ಲ. ದಯಮಾಡಿ ತುರ್ತಾಗಿ ಡಾಕ್ಟರ್‌ಗಳು ಅಲ್ಲಿಗೆ ಬಂದು ಡ್ಯೂಟಿ ರಿಪೋರ್ಟ್ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಹಿರಿಯ ಗೌರವಾನ್ವಿತ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ನಮ್ಮ ಆಫೀಸಿನ ಮುಂದೆ ನಾನು ಬರುವುದಕ್ಕೆ ಮುಂಚೆಯೇ 10 ಗಂಟೆಗೆ ಧರಣಿಯನ್ನು ಮಾಡಿದ್ದರು. ನಾನು ಅವರನ್ನು ಸಮಾಧಾನ ಮಾಡಿ ತಾವು ಹಿರಿಯ ಸದಸ್ಯರಾಗಿದ್ದೀರಿ, ತಾವು ಹೊರಗಡೆ ಕುಳಿತುಕೊಳ್ಳಬಾರದು ನಮಗಿಂತಲೂ ಬಹಳ ದೊಡ್ಡವರೆಂದು ಒಳಗಡೆ ಕರೆದುಕೊಂಡು ಹೋಗಿ ಆವತ್ತೆ ಇಬ್ಬರು ಡಾಕ್ಟರ್‌ಗಳನ್ನು ಆದೇಶ ಮಾಡಿ ಅಲ್ಲಿಗೆ ಹಾಕಿದೆ. ಆದರೆ ಅವರು ಅಲ್ಲಿಗೆ ಹೋಗುವುದಕ್ಕೆ ತಡ ಮಾಡಿದ್ದಾರೆ. ಈಗಾಗಲೇ ನಮ್ಮ ಎಲ್ಲಾ ಡಿ.ಹೆಚ್.ಓ.ಗಳು ಇರಬಹುದು, ನಮ್ಮ ಎಲ್ಲಾ ಡಿಸ್ಟ್ರಿಕ್ಟ್ ಸರ್ಜನ್‌ಗಳಿಗೆ ಈ ಬಗ್ಗೆ ವಾರ್ನ್ ಮಾಡಿ ಹೇಳಿದ್ದೇನೆ. ದಯವಿಟ್ಟು ಸರ್ಕಾರ ಏನು ವರ್ಗಾವಣೆಯನ್ನು ಮಾಡಿದೆ ಆ ವರ್ಗಾವಣೆಯ ಸ್ಥಳಕ್ಕೆ ಕೂಡಲೆ ಹೋಗಬೇಕು ಇಲ್ಲದಿದ್ದರೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ನಾನು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇನೆ. ಯಾರು ಡಿ.ಹೆಚ್.ಒ. ಅಥವಾ ಡಿ.ಎಸ್. ಈ ರೀತಿಯ ವರ್ಗಾವಣೆಯ ಸಂದರ್ಭದಲ್ಲಿ ಏನಾದರೂ ತಪ್ಪುಗಳನ್ನು ಮಾಡಿದರೆ ನಿಮ್ಮ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ನಾನು ಆಗಲೇ ಕೊಟ್ಟಿದ್ದೇನೆ. ನನಗೆ ಅನ್ನಿಸುತ್ತದೆ, ಕರ್ನಾಟಕದಲ್ಲಿ ಬಹಳ ಮಿಸ್‌ಮ್ಯಾಚ್ ಇತ್ತು. ಗೌಸಿಯಾ ಆಸ್ಪತ್ರೆ ಎಂದು ಬೆಂಗಳೂರಿನಲ್ಲಿದೆ. ಗೌಸಿಯಾ ಹೆರಿಗೆ ಆಸ್ಪತ್ರೆ ಎಂದು ಬೋರ್ಡ್ ಇದೆ. ಆದರೆ ಅಲ್ಲಿ ಒಬ್ಬರೂ ಹೆರಿಗೆ ಡಾಕ್ಟರ್‌ಗಳೇ ಇರಲಿಲ್ಲ. ಮೂರು ಜನ sanction post ಇದೆ. ಆದರೆ 3 ಜನರು ಹೆರಿಗೆ ತಜ್ಞರಲ್ಲ. ಈ ತರಹದ್ದು ಕರ್ನಾಟಕದಲ್ಲಿ ಒಂದೇ ಕಡೆ ಎಲ್ಲಾ ಸ್ಪೆಷಲಿಸ್ಟ್‌ಗಳು.....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅನೇಕ ಸರ್ಕಾರಗಳು ಬರುತ್ತದೆ, ಮಂತ್ರಿಗಳು ಈ ರೀತಿಯಾಗಿ ಹೇಳುತ್ತಲೇ ಇರುತ್ತಾರೆ. ಎಲ್ಲೋ ಒಂದು ಕಡೆಗೆ ಈ ತರಹದ ಉದ್ಯೋಗಸ್ಥರಿದ್ದರಲ್ಲಾ,

ಡಾಕ್ಟರ್ಸ್‌ಗಳ ಮೇಲೆ ನೀವು ಕ್ರಮವನ್ನು ಜರುಗಿಸುವುದಿಲ್ಲ. ಇಲ್ಲಿ ಏನು ಹೇಳುತ್ತೀರಿ, ಅದು ಪೇಪರ್‌ನಲ್ಲಿ ಉಳಿಯುತ್ತದೆ. ನಿಮ್ಮ ವಿಚಾರಕ್ಕೆ ನಾನು ಹೇಳುತ್ತಿಲ್ಲ, ಇದುವರೆವಿಗೂ ಎಲ್ಲಾ ಮಂತ್ರಿಗಳು ಹೀಗೆಯೇ ಹೇಳುವುದೇ ಆಗಿದೆ. ಕ್ರಮ ಜರುಗಿಸುತ್ತಾರೆಂದರೆ ಅವರು ಅಬ್ಸೆಂಟ್ ಆಗುತ್ತಾರೆ. ಕೆಲವರು ದುಬೈಗೆ ಹೊರಟುಹೋಗಿದ್ದಾರೆ. ಇನ್ನು ಕೆಲವರು ಬೇರೆ ಕಡೆಗೆ ಹೋಗಿದ್ದಾರೆ. ಇನ್ನು ಕೆಲವರು ಪ್ರೈವೇಟ್ ಪ್ರಾಕ್ಟೀಸ್ ಮಾಡಿಕೊಳ್ಳುತ್ತಿದ್ದಾರೆ. ಇವರು ಯಾವ ವಾರ್ನಿಂಗ್ ಕೊಟ್ಟರೂ ಬಗ್ಗುವುದಿಲ್ಲ. ಅವರುಗಳೆಲ್ಲರೂ ಸಂಬಳವನ್ನು ತೆಗೆದುಕೊಳ್ಳುತ್ತಿರುತ್ತಾರೆ, 7–8 ವರ್ಷಗಳಾದ ಮೇಲೆ ಬಂದು ಲೀವ್‌ನ್ನು ರೆಟ್ರಿಫೈ ಮಾಡಿಕೊಳ್ಳುತ್ತಾರೆ. ಅದಕ್ಕೆ ಡೈರೆಕ್ಟರೇಟ್, ಹೆಲ್ತ್ ಆಫೀಸ್‌ನಲ್ಲಿ ಒಂದು ದೊಡ್ಡ ವ್ಯೂಹವೇ ಇದೆ. There is something basically wrong ನೀವು ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದೀರಿ ಹೇಳಿ? ನೀವು ಅಧಿಕಾರಕ್ಕೆ ಬಂದ ಮೇಲೆ You are an young man ಇಷ್ಟು ಜನರನ್ನು ಇದಕ್ಕಾಗಿ ಇಟ್ಟಿದ್ದೇವೆ. ಈ ತರಹ ಶಿಸ್ತನ್ನು ವಯಾಲೇಟ್ ಮಾಡಿದವರನ್ನು, ಹಾಕಿದ ಜಾಗಕ್ಕೆ ಹೋಗದೆ ಇರುವವರನ್ನು ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದೀರಿ? ಅದರ ಬಗ್ಗೆ ಹೇಳಿ. ಅದನ್ನು ಮಾಡುವುದಕ್ಕಾಗುವುದಿಲ್ಲ, ಯಾರೋ ಒಬ್ಬರನ್ನು ಹಿಡಿದುಕೊಂಡು ಬರುತ್ತಾರೆ, ಇವೆಲ್ಲಾ ಕಷ್ಟ, ಸುಮ್ಮನೆ ಮಿಸ್‌ಲೀಡಿಂಗ್ ಅಷ್ಟೆ. ಏನೋ ಮಾಡುತ್ತೇವೆಂದು ಕುಳಿತುಕೊಂಡು ಬಿಡಿ. ಆಗುವುದು ಆಗುತ್ತಿರುತ್ತದೆ, ಹೇಳುವವರು ಹೇಳುತ್ತಿರುತ್ತಾರೆ. ನಿಮ್ಮ ಆಸ್ಪತ್ರೆಯ ಗತಿಯೂ ಅಷ್ಟೆ. ನಮ್ಮ ಆಸ್ಪತ್ರೆಯ ಗತಿಯೂ ಅಷ್ಟೇ. ನೀವು ಚಿಕ್ಕವರು ಎಂದು ನಾನು ಹೇಳಲಿಲ್ಲ ಏಕೆ ಏನು ಮಾತನಾಡುವುದು, ಈ ಕ್ವಾಕ್ಸ್ ಇದ್ದಾರಲ್ಲಾ ಆರ್.ಎಂ.ಪಿ.ಗಳು ಒಬ್ಬೊಬ್ಬರು ಇದುವರೆವಿಗೂ ಒಂದರಿಂದ ಒಂದೂವರೆ ಲಕ್ಷವನ್ನು ಮಾಡಿಕೊಂಡಿದ್ದಾರೆ, ಈ ಕಾಲೇಜ್ ಸ್ಟಾರ್ಟ್ ಆದಾಗ. ಜನರಿಗೆ ಗತಿಯಿಲ್ಲ ಏನು ಮಾಡುತ್ತಾರೆ ಹೇಳಿ. ಆಸ್ಪತ್ರೆಯಲ್ಲಿ ಮೆಡಿಸನ್ ಸಿಗುವುದಿಲ್ಲ ಹಾಗೂ ಡಾಕ್ಟರ್‌ಗಳೂ ಕೂಡ ಇರುವುದಿಲ್ಲ. ಅವನು ಕ್ವಾಕ್ ಏನು ಕೊಡುತ್ತಾನೆ ಅದೆ ಅವರಿಗೆ ಮೆಡಿಸನ್. ಕ್ವಾಕ್‌ಗಳಿಗೆಲ್ಲಾ ಸುಗ್ಗಿ ಬಂದುಹೋಯಿತು. ಬೇಕಾದರೆ information ತರಿಸಿಕೊಳ್ಳಿ ಯಾವ ಯಾವ ಕ್ವಾಕ್ ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಮಾಡಿದ್ದಾನೆಂದು ಗೊತ್ತಾಗುತ್ತದೆ. ಕೆಲಸದಲ್ಲಿ ಕನ್‌ವಿಕ್ಷನ್ ಇರಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಕರ್ನಾಟಕದಲ್ಲಿ ಬಹಳಷ್ಟು ಕಡೆಗಳಲ್ಲಿ ಈ ತರಹದ್ದು ನಡೆಯುತ್ತಿರತ್ಕದ್ದು ನನ್ನ ಗಮನಕ್ಕೆ ಬಂದಿದೆ. ಆದರೆ ನಾನು ಬಂದ ಮೇಲೆ ನಮ್ಮ ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಬಗ್ಗೆ ಮಾನ್ಯ ರಮೇಶ್‌ಕುಮಾರ್ ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಬೇಕಾದರೆ ಪರಿಶೀಲನೆ ಮಾಡಬಹುದು. ಈ ಬಾರಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಏನು ಸ್ಯಾಂಕ್ಷನ್ ಪೋಸ್ಟ್ ಇವೆ ಅದನ್ನು ತುಂಬುವಂತಹ ಪ್ರಯತ್ನವನ್ನು ಮಾಡಿದ್ದೇನೆ. ನಮ್ಮ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ 100 ಪರ್ಸೆಂಟ್ ನಾನಂತೂ ಪೋಸ್ಟ್ ಮಾಡಿದ್ದೇನೆ. ಸ್ಯಾಂಕ್ಷನ್ಡ್ ಪೋಸ್ಟ್ ಏನಿದೆ ಆ ಪೋಸ್ಟ್‌ನ್ನು ಮಾತ್ರ ಮಾಡಿದ್ದೇನೆ. ಎಲ್ಲೂ ಕೂಡ ಮಿಸ್‌ಮ್ಯಾಚ್ ಆಗಬಾರದು.

ಆ ರೀತಿಯಾದಂತಹ ವ್ಯವಸ್ಥೆಯನ್ನು ಈ ಬಾರಿ ನಾನು ಮೊದಲ ಬಾರಿಗೆ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇನೆ. ಅವರೆಲ್ಲರೂ ಅಲ್ಲಿಗೆ ಹೋಗಿ ಕೆಲಸವನ್ನು ಮಾಡಬೇಕು. ಆ ಕೆಲಸವನ್ನು ನಾವು ಮಾಡುವವರಿದ್ದೇನೆ. ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ.....

ಛೇರ್ಮನ್ : ಮಾನ್ಯ ಸಚಿವರು ಮುಗಿಸಲಿ.

ಶ್ರೀ ಎ. ಕೃಷ್ಣಪ್ಪ : ಈಗ 100 ಬೆಡ್ ಆಸ್ಪತ್ರೆಯ ವಿಚಾರವಾಗಿ ನಮ್ಮ ಮಾನ್ಯ ಚಲುವರಾಯಸ್ವಾಮಿಯವರು ನಮ್ಮಲ್ಲಿಗೆ ಬಂದು visit ಮಾಡಿದರು. ನಾನು ಖುದ್ದಾಗಿ ಅವರಿಗೆ ಲೆಟರ್‌ನ್ನು ಬರೆದುಕೊಟ್ಟೆ. ಇವತ್ತಿನವರೆಗೆ ಆ vacancy ಭರ್ತಿ ಮಾಡಲಿಲ್ಲ. ನೀವು ಆರ್ಡರ್ ಮಾಡಿದ್ದೇನೆಂದು ಹೇಳಿದರೆ ಏನು ಪ್ರಯೋಜನ? ಆರ್ಡರ್ ನಿಮ್ಮ ಆಫೀಸ್‌ನಲ್ಲಿರುತ್ತದೆ. ಅಲ್ಲಿ ಜನರಿಗೆ ಏನು ಪ್ರಯೋಜನ ಬಂತು? ನಾನು ಆ ಬಗ್ಗೆ ಪ್ರತ್ಯೇಕವಾಗಿ ಮಾತುಕತೆಯಾಡಬೇಕೆಂದು ನಾನು ಬೇರೆಯವರ ಸಮಯವನ್ನು ವ್ಯರ್ಥಮಾಡುವುದು ಬೇಡವೆಂದು ಅದಕ್ಕಾಗಿ ನಾನು ಮಾತನಾಡಲಿಲ್ಲ. You are not able to post even a driver ಆ ಡ್ರೈವರ್‌ಗೆ ಬೆಗ್ ಬಾರೋ ಎಂದು ಹೇಳಿ ಯಾರೋ ಒಬ್ಬನನ್ನು ಅಲ್ಲಿಗೆ ತಂದು ಕೊಟ್ಟಿದೇವೆ. ಅಲ್ಲಿ ಆ್ಯಂಬುಲೆನ್ಸ್‌ಗಳು ಇವೆ ಅಲ್ಲಿ ಅದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ವೆಹಿಕಲ್ಸ್‌ಗಳು ಇವೆ, ಅದೇ ರೀತಿಯಾಗಿ 100 ಬೆಡೆಡ್ ಆಸ್ಪತ್ರೆಗಳನ್ನು ಕಣ್ಣೀರು ಸುರಿಸಿ ಮಾಡಿದ್ದೆವು. ಅದಕ್ಕೆ ಕೊಡಬೇಕಾದಂತಹ ಸ್ಟಾಫ್‌ಗಳನ್ನು ಕೊಟ್ಟಿರುವುದಿಲ್ಲ. ಇನ್ನು ಹಾಸ್ಪಿಟಲ್‌ಗಳ ಗತಿ ಏನು? ಈಗ ಸ್ಪೆಷಲ್ ಕ್ರೈಸಿಸ್ ಯಾವುದೋ ಒಂದು ವಿಚಿತ್ರವಾದಂತಹ ಕಾಯಿಲೆ ಬಂದಿದೆ. ಅಲ್ಲಿ ಸಾವಿರಾರು ಜನರು ನಮ್ಮದು ಹೈಯೆಸ್ಟ್ ಪಾಪ್ಯುಲೇಷನ್ ಇರುವಂತಹ ಏರಿಯಾ ಆಗಿದೆ. ಚಾಮರಾಜನಗರ ಜಿಲ್ಲೆಯ ಜನರು ಏನಿದ್ದಾರೆ, ಈ ಪೂರ್ವ ತಾಲ್ಲೂಕಿನಲ್ಲಿ ಒಂದೇ ಕಡೆ ಇದ್ದಾರೆ. ಅದರ ಬಗ್ಗೆ ನಿಮಗೂ ಕೂಡ ಗೊತ್ತಿದೆ. ನಮಗಿಂತ ವರ್ಸ್ಟ್ ನಿಮ್ಮ ತಾಲ್ಲೂಕು ಹಾಗೂ ನಿಮ್ಮ ಕ್ಷೇತ್ರ. ಅಲ್ಲಿಗೆ ಸ್ಟಾಫ್‌ಗಳನ್ನು ಬೇಗ ಪೋಸ್ಟ್ ಮಾಡಬೇಕು. ಯಾವ ಯಾವ ಪ್ರೊಫೆಷನ್‌ನಲ್ಲಿ ಯಾವ ಯಾವ ಕೇಡರ್‌ನಲ್ಲಿ ಡಾಕ್ಟರ್‌ಗಳು ಬರಬೇಕು ಅವರುಗಳು ಬರದೆ ಇದ್ದರೆ ಆಸ್ಪತ್ರೆಯನ್ನು ಮುಚ್ಚುವುದು ಬೆಟರ್. ಏನೋ ಒಂದು ಇಂಟೆನ್‌ಷನ್ ಇಟ್ಟುಕೊಂಡು ನಾವು ಹಾಸ್ಪಿಟಲ್‌ನ್ನು ಮಾಡಿದೆವು, That intension is totally defeated. ಈಗ ಏನೂ ಇಲ್ಲ. ಅದಕ್ಕಾಗಿ ನಾನು ಅದನ್ನು ಪ್ರತ್ಯೇಕವಾಗಿ ಹೇಳೋಣವೆಂದು ಇದ್ದೆ. ತಾವು ಆಗಿನಿಂದಲೂ ಕೂಡ ಆರ್ಡರ್ ಕೊಟ್ಟಿದ್ದೇನೆಂದು ಹೇಳುತ್ತಲೇ ಇದ್ದೀರಿ. ಅದನ್ನು ಕೇಳಿ ನಾನು ಆಕರ್ಷಣೀಯವಾಗಿದ್ದೆ. ಆರ್ಡರ್ ಕೊಟ್ಟಿದ್ದರೆ ಅದು ನನಗೂ ಕೂಡ ಬಂದಿರುತ್ತದೆ ಎಂದುಕೊಂಡಿದ್ದೆ. ನಿನ್ನೆಯಲ್ಲ ಮೊನ್ನೆ, ಈ ಕಾಯಿಲೆಯ ಬಗ್ಗೆ ಮಾತನಾಡುವಾಗ ಡಾಕ್ಟರ್‌ಗಳು, ಅಡ್ಮಿನಿಸ್ಟ್ರೇಟೀವ್ ಆಫೀಸರ್‌ಗಳು ಇವರನ್ನೆಲ್ಲ ಕರೆಸಿದ್ದೆವು. ಸ್ಟಾಪೇ ಇಲ್ಲ ಏನು ಮಾಡೋಣ ಸಾರ್ ಎಂದು ಹೇಳುತ್ತಾರೆ. ನೀವು ಯಾರನ್ನು ಕಳುಹಿಸಿದ್ದೀರಿ? ಅವರು ಎಲ್ಲಿದ್ದಾರೆ? If they don't carry out your direction ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ you must be serious in taking some disciplinary action at some point ಎಲ್ಲಾದರೂ ಒಂದು ನಾಲ್ಕಾರು ಕಡೆ 10–15 ಜನರನ್ನು ಸಸ್‌ಪೆಂಡ್ ಮಾಡಿ.

ಶ್ರೀ ಆರ್. ಅಶೋಕ್ : ಈಗಾಗಲೇ ಜಿಲ್ಲಾ ಆಸ್ಪತ್ರೆಗಳಿಗೆ ಏನು ಮಿಸ್‌ಮ್ಯಾಚ್ ಆಗಿದೆ ಅದನ್ನು ಸರಿಪಡಿಸುವ ಕೆಲಸವನ್ನು ನಾನು ಮಾಡಿದ್ದೇನೆಂದು ಹೇಳಿದೆ. ಮಾನ್ಯ ಕೃಷ್ಣಪ್ಪನವರು ಸರ್ಕಾರ ನಡೆಸಿರತಕ್ಕವರು, ತಮಗೆ ಈಗಾಗಲೇ ಗೊತ್ತಿದೆ. ಈಗಾಗಲೇ ಹಾಲಿ 675 ವೈದ್ಯರ ಕೊರತೆ ಇದೆ. ನಮ್ಮ ಇಲಾಖೆಯವರು ಬೇರೆ ಇಲಾಖೆಗಳಲ್ಲಿ ಹೋಗಿ ಕೆಲಸ ಮಾಡುತ್ತಿರುವುದು ನನ್ನ ಗಮನಕ್ಕೆ ಕೂಡ ಬಂದಿದೆ. ಈಗಾಗಲೇ ಅಂಥವರನ್ನೆಲ್ಲಾ ಬೆಂಗಳೂರು ಮಹಾನಗರ ಪಾಲಿಕೆ ಇರಬಹುದು, ಬೇರೆ ಬೇರೆ ನಗರಸಭೆ ಇರಬಹುದು, ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ವಾಪಸ್ ತರತಕ್ಕ ಪ್ರಕ್ರಿಯೆಯನ್ನು ನಾನು ಆರಂಭ ಮಾಡಿದ್ದೇನೆ. ತಾವು ಹಿರಿಯರಿದ್ದೀರಿ, ನಮ್ಮ ಡಿ.ಹೆಚ್.ಓ office ಗಳಲ್ಲಿ ಯಾವ ರೀತಿಯಾದ ವ್ಯವಸ್ಥೆ ಇದೆ ಎಂಬುದು ತಮಗೆ ಗೊತ್ತಿದೆ. ಒಂದೊಂದು ಕಡೆ ಎಂಟೆಂಟು ಜನ ಡಿ.ಹೆಚ್.ಓ office ಗಳಲ್ಲಿ ಕ್ಲಾರಿಕಲ್ ಜಾಬ್ ಮಾಡುತ್ತಿದ್ದಾರೆ. ಅಲ್ಲಿ ಏನು ಕೆಲಸವಿದೆ ಅದಕ್ಕಿಂತ ಜಾಸ್ತಿ ಜನ ಡಾಕ್ಟರ್‌ಗಳಿದ್ದಾರೆ. ಏಕೆ ಹೋಗುತ್ತಾರೆಂದರೆ ಅಲ್ಲಿ ಆರಾಮ್ job. ಅಲ್ಲಿ ಆರಾಮವಾಗಿ ಇರಬಹುದೆಂಬ ದೃಷ್ಟಿಯಿಂದ ಹೋಗುತ್ತಿದ್ದಾರೆ. ಅದಕ್ಕೆ ನಾನು ಈ ಬಾರಿ ತೀರ್ಮಾನ ಮಾಡಿದ್ದೇನೆ, ಅಲ್ಲಿ ಒಂದು ಮೂರು ಜನ ಡಾಕ್ಟರ್‌ಗಳನ್ನು ಮಾತ್ರ ಉಳಿಸಿಆ ಡಿ.ಹೆಚ್.ಓ office ಗಳಲ್ಲಿ ಯಾರ್ಯಾರು ಸ್ಪೆಶಲಿಸ್ಟ್‌ಗಳಿದ್ದಾರೋ ಅವರನ್ನೂ ಸಹ ತೆಗೆದು ನಮ್ಮ ಆಸ್ಪತ್ರೆಗಳಿಗೆ ಅವರು ಬಂದು ಕೆಲಸ ಮಾಡಬೇಕು ಎಂಬ ಉದ್ದೇಶವನ್ನು ನಾನು ಇಟ್ಟುಕೊಂಡಿದ್ದೇನೆ. ಈಗಾಗಲೇ ನಾನು ಆ ಪ್ರಯತ್ನವನ್ನು ಮಾಡುತ್ತಿದ್ದೇನೆ. 500 ಡಾಕ್ಟರ್‌ಗಳನ್ನು 2700 ಪ್ಯಾರಾಮೆಡಿಕಲ್ staff ಅನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಈಗಾಗಲೆ ಪ್ರಾರಂಭ ಮಾಡಿದ್ದೇವೆ. ಗೆಜೆಟ್‌ನ್ನು ತಂದುಬಿಟ್ಟಿದ್ದೇವೆ. ಅದು ಆದ ತಕ್ಷಣ.....

ಶ್ರೀ ಎಸ್.ಎಸ್. ಪಾಟೀಲ್ : 665 ವೈದ್ಯರುಗಳ ಕೊರತೆ ಇದೆಯೆಂದು ತಾವು ಇಲ್ಲಿ ಹೇಳುತ್ತಿದ್ದೀರಿ. ಆದರೆ 500 ವೈದ್ಯರುಗಳನ್ನು ತುಂಬುತ್ತೇವೆಂದು ಹೇಳುತ್ತೀರಿ. 665ನ್ನು ತುಂಬಿ. ಇಲ್ಲದಿದರೆ ಹೇಗೆ ಮಾಡುತ್ತೀರಿ? ಆ 665 ನ್ನು ತುಂಬಿ.

ಶ್ರೀ ಆರ್. ಅಶೋಕ್ : ಈಗ 500 ವೈದ್ಯರುಗಳನ್ನಾದರೂ ತುಂಬುತ್ತಿದ್ದೇವಲ್ಲಾ ಇದುವರೆಗೆ ಅಷ್ಟೂ ಕೊರತೆ ಇತ್ತಲ್ಲಾ. ಈಗ ತುಂಬುವಂಥ ಕೆಲಸ ಪ್ರಾರಂಭ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : 665 ತುಂಬುತ್ತಿಲ್ಲ. ಆದ್ದರಿಂದ ಮತ್ತೆ ಇವರು ನಮ್ಮ ಹಳ್ಳಿಗಳಿಗೆ ವೈದ್ಯರುಗಳನ್ನು ಹಾಕುವುದೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಮ್ಮ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ. ಆದ್ದರಿಂದ ನಾನು ಆಗಲೇ ತಮಗೆ ಹೇಳಿದೆ ರೀತಿ ಇಲ್ಲಿ ಮಲಗುವುದಕ್ಕೆ ಸಿದ್ಧನಾಗಿ ಬರುತ್ತಿದ್ದೇನೆ. ನೀವು ಏನಾದರೂ ಮಾಡಿಕೊಳ್ಳಿ!

ಶ್ರೀ ಎಸ್.ಎಸ್. ಪಾಟೀಲ್ : 665 ವೈದ್ಯರ ಹುದ್ದೆ ಖಾಲಿ ಇದೆ ಮಾನ್ಯ ಉದಾಸಿಯವರೇ ಎಲ್ಲರೂ ಇಲ್ಲಿದ್ದೀರಿ, 665 ಕೊರತೆ ಇದೆಯೆಂದು ಹೇಳಿ 500 ತುಂಬುತ್ತೇವೆಂದು ಹೇಳುತ್ತೀರಿ. 665ನ್ನು ದಯಮಾಡಿ ತುಂಬಿ. ಇಲ್ಲದಿದ್ದರೆ ನೀವು ಮತ್ತೆ ಹಳ್ಳಿಗಳಿಗೆ ವೈದ್ಯರುಗಳನ್ನು ಹಾಕುವುದೇ ಇಲ್ಲ. ಹಳ್ಳಿ ಖಾಲಿಯೇ ಇರುತ್ತದೆ.

ಶ್ರೀ ಆರ್. ಅಶೋಕ್ : ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಿದ ಮೇಲೆ ಇಬ್ಬರು ಡಾಕ್ಟರ್‌ಗಳನ್ನು ಕಳುಹಿಸಿದೆವು. ಅಲ್ಲಿ ಇನ್ನೂ ಎರಡು shortage ಇದೆ. ಬೇಕಾದರೆ ನಾನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೇಳಿಬಿಡುತ್ತೇನೆ. ನಿಮ್ಮ ಜಿಲ್ಲೆಯದ್ದು ಜಿಲ್ಲಾ ಆಸ್ಪತ್ರೆ ಚಾಮರಾಜನಗರದಲ್ಲಿ 14 ಪೋಸ್ಟ್ ಇದೆ. ಅದರಲ್ಲಿ 10 ಜನರಿದ್ದರು. ತಾವು ಧರಣಿ ಮಾಡಿದ ಮೇಲೆ ಇಬ್ಬರನ್ನು ಹಾಕಿದ್ದೇವೆ. ಈಗ 12 ಜನರಿದ್ದಾರೆ. ಅನಂತರ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯಲ್ಲಿ 28 ಜನ ಇರಬೇಕಾಗಿತ್ತು. 27 ಜನರಿದ್ದಾರೆ. ಚಾಮರಾಜನಗರ ತಾಲ್ಲೂಕು ಕೇಂದ್ರದಲ್ಲಿ 22 ಜನರಿರಬೇಕು 20 ಜನರಿದ್ದಾರೆ. ಎರಡು ಜನ short ಇದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 30 ಜನರಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಇವರ ಲೆಕ್ಕದಲ್ಲಿದೆ. ಆದರೆ ಅಲ್ಲಿ ವೈದ್ಯರಿಬ್ಬರು ವೈದ್ಯರು ಖಂಡಿತ ಇಲ್ಲ. ಇವರ ಲೆಕ್ಕದಲ್ಲಿದ್ದಾರೆ ಆದರೆ ಅಲ್ಲಿ ವೈದ್ಯರು ಇಲ್ಲ.

ಶ್ರೀ ಆರ್. ಅಶೋಕ್ : ಈಗ ವರ್ಗಾವಣೆಗಳಾಗಿವೆ. ಅದಷ್ಟು ಬೇಗ ಅವರೆಲ್ಲಾ ಅಲ್ಲಿಗೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇವರ ಲೆಕ್ಕದಲ್ಲಿದ್ದಾರೆ. ಆದರೆ ಅಲ್ಲಿ ಖಂಡಿತ ವೈದ್ಯರಿಲ್ಲ. ಆದ್ದರಿಂದ ಈ ಸದನದಲ್ಲಿ ನಾನು ತೀರ್ಮಾನ ತೆಗೆದುಕೊಂಡಿರುವ ಪ್ರಕಾರ ಅಲ್ಲಿಗೆ ವೈದ್ಯರುಗಳನ್ನು ನೇಮಕ ಮಾಡಲೇಬೇಕು. ಇಲ್ಲದಿದ್ದರೆ ವಿದಿಯೇ ಇಲ್ಲ. ನಿಮ್ಮ ವಿರುದ್ಧ ಮಾಡಬೇಕೆಂಬ ಮನಸ್ಸು ನನಗೆ ಇಲ್ಲ. ಆದರೆ, ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಆರ್. ಅಶೋಕ್ : ಆದಷ್ಟು ಶೀಘ್ರವಾಗಿ ಆ ಕೆಲಸ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಛೇರ್ಮನ್‌ರವರೆ, ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರಿಗೆ ಒಂದು ಸಲಹೆ ಕೊಡುತ್ತೇನೆ. ಅದೇನೆಂದರೆ, ಇಸ್ರೇಲ್‌ನಲ್ಲಿ 10ನೇ ತರಗತಿ ವ್ಯಾಸಂಗ ಮುಗಿದ ಮೇಲೆ ಆನಂತರ ಎರಡು ವರ್ಷ ಕಡ್ಡಾಯವಾಗಿ ಆರ್ಮಿಗೆ ಕಳುಹಿಸುತ್ತಾರೆ. ಅವರು ಹೆಣ್ಣುಮಕ್ಕಳೇ ಆಗಿರಬಹುದು ಅಥವಾ ಗಂಡು ಮಕ್ಕಳೆ ಆಗಿರಬಹುದು. ಆದ್ದರಿಂದ ನಾನು ಹೇಳತಕ್ಕಂಥದ್ದು ಏನೆಂದರೆ ಎಂಬಿಬಿಎಸ್ ಮುಗಿಸಿದವರನ್ನು ಕನಿಷ್ಟ ಎರಡು ಅಥವಾ ಮೂರು ವರ್ಷಗಳವರೆಗೆ ಹಳ್ಳಿಗಾಡಿನಲ್ಲಿ ಕೆಲಸ ಮಾಡುವಂಥದರ ಬಗ್ಗೆ ಈ ಹೌಸ್ ಅಡ್ಜ್‌ನ್ ಆದ ಮೇಲೆ ಒಂದು ಜಿ.ಓ. ಮಾಡಿ. ಆನಂತರ ಬೇಕಾದರೆ ಅವರು ಪಿ.ಜಿ. ಅಥವಾ ಎಂ.ಡಿ. ಕೋರ್ಸ್ ಮಾಡುವುದಕ್ಕೆ ಹೋಗಲಿ. ಆದ್ದರಿಂದ ಕನಿಷ್ಟ ಎರಡು ವರ್ಷಗಳವರೆಗೆ ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕಂಥ ಒಂದು ಜಿ.ಓ. ತಂದರೆ ಆನಂತರ ಡಾಕ್ಟರ್‌ಗಳನ್ನು ಹಳ್ಳಿಗಳಿಗೆ ಕಳುಹಿಸತಕ್ಕಂಥ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ಹಳ್ಳಿಗಳಿಗೆ ಕಳುಹಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಏಕೆಂದರೆ ಅವರು ಕೂಡ ದುಡ್ಡು ಕಾಸು

ಕೊಟ್ಟು ಅಂದರೆ ಡೊನೇಷನ್ ಕೊಟ್ಟು ಡಾಕ್ಟರ್‌ಗಳು ಆಗಿರುತ್ತಾರೆ. ಆದ್ದರಿಂದ ನೀವು ಎಷ್ಟೇ ಪ್ರೆಷರ್ ತಂದರೂ ಕೂಡ ಅವರು ಮತ್ತೆ ನಿಮ್ಮ ಮೇಲೆ ಎಲ್ಲಾ ವಿಧವಾದಂಥ ಪ್ರೆಷರ್ ತಂದು ಮತ್ತೆ ನಿಮ್ಮ ಕೈಯಿಂದಲೇ ಅವರನ್ನು ಬೇಕಾದ ಕಡೆ ಹಾಕುತ್ತೀರಿ. ಆದ್ದರಿಂದ ಮುಂದಿನ ವರ್ಷದಿಂದ ಕನಿಷ್ಟ ಎರಡು ವರ್ಷ ಹಳ್ಳಿಗಳಲ್ಲಿ ಕೆಲಸ ಮಾಡುವಂಥದರ ಬಗ್ಗೆ ಒಂದು ಜಿ.ಓ. ಅನ್ನು ಈ ಹೌಸ್ ಮುಗಿದ ತಕ್ಷಣ ಮಾಡಬೇಕು. ಈ ಅವಧಿಯಲ್ಲಿ ಸಂಬಳ ಕೊಡತಕ್ಕಂಥದ್ದು ಸ್ವಲ್ಪ ಕಡಿಮೆ ಮಾಡಿಕೊಡಬಹುದು. ಆದರೆ, ಈ ಅವಧಿಯಲ್ಲಿ ಎಲ್ಲರಿಗೂ ಕೆಲಸ ಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಎಲ್ಲಾ ಆಸ್ಪತ್ರೆಗಳಲ್ಲಿ ಇದೇ ಗತಿಯಿದೆ. ಕೋಲಾರ ಜಿಲ್ಲೆಯಲ್ಲಿಯಂತೂ ಇದೇ ಗತಿಯಾಗಿದೆ. ಆದ್ದರಿಂದ ಇದರ ಬಗ್ಗೆ ಅಧಿಕಾರಿಗಳ ಚರ್ಚೆ ಮಾಡಿ ಮುಂದಿನ ದಿನಗಳಲ್ಲಿ ಈ ರೀತಿಯಾದ ಒಂದು ವ್ಯವಸ್ಥೆ ಮಾಡುವುದರ ಬಗ್ಗೆ ಸೀರಿಯಸ್ ಆಗಿ ಚಿಂತನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಆರ್. ಧ್ರುವನಾರಾಯಣರವರು ಸದನದ ಬಾವಿಗೆ ಧರಣಿ ಮಾಡಲು ಬಂದರು)

ಛೇರ್ಮನ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ತಾವು ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಆರ್. ಅಶೋಕ್ : ಈಗಾಗಲೇ ಇಬ್ಬರನ್ನು ಅಲ್ಲಿಗೆ ನೇಮಕ ಮಾಡಲಾಗಿದೆ. ಇನ್ನು ಇಬ್ಬರನ್ನು ಆದಷ್ಟು ಶೀಘ್ರವಾಗಿ ನೇಮಕ ಮಾಡಲಾಗುತ್ತದೆ. ತಾವು ದೊಡ್ಡವರಿದ್ದೀರಿ. ಆದ್ದರಿಂದ, ನೀವು ಹೇಳಿದ ಮೇಲೆ ನಾವು ಹಾಕಲೇಬೇಕು. ಖಂಡಿತ ಇಬ್ಬರನ್ನು ಹಾಕುತ್ತೇವೆ. ಈಗ ಡಾಕ್ಟರ್ಸ್ ಸಂದರ್ಶನ ನಡೆಯುತ್ತಿದೆ. ಇದು ಮುಗಿದ ನಂತರ ಖಂಡಿತ ಇಬ್ಬರನ್ನು ಅಲ್ಲಿಗೆ ನೇಮಕ ಮಾಡುತ್ತೇವೆ.

ಛೇರ್ಮನ್ : ನೀವು ಅಲ್ಲಿಯೂ ಕೂಡ ಧರಣಿ ಮಾಡಿದ್ದೀರಿ ಮತ್ತೆ ಇಲ್ಲಿಯೂ ಕೂಡ ಧರಣಿ ಮಾಡಿದ್ದೀರಿ. ಇದನ್ನು ಮಾನ್ಯ ಸಚಿವರು ಬಹಳ ಸೀರಿಯಸ್ ಆಗಿ ತೆಗೆದುಕೊಂಡಿದ್ದಾರೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಆರ್. ಅಶೋಕ್ : ಮಾನ್ಯ ವಾಟಾಳ್ ನಾಗರಾಜ್‌ರವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಧ್ರುವನಾರಾಯಣರವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಛೇರ್ಮನ್ : ಸುಧಾಕರ್‌ರವರೇ, ತಾವು ಏನು ಹೇಳುತ್ತೀರಾ? ದಯವಿಟ್ಟು ಶಾರ್ಟ್ ಆಗಿ ಹೇಳಿ.

ಡಾ॥ ಎಂ.ಸಿ. ಸುಧಾಕರ್ : ಮಾನ್ಯ ಛೇರ್ಮನ್‌ರವರೆ, ಮೆಡಿಕಲ್ ಅಥವಾ ಡೆಂಟಲ್ ಕೋರ್ಸ್‌ನಲ್ಲಿ ಒಂದು ವರ್ಷ ಇಂಟರ್‌ಶಿಪ್ ಮಾಡುತ್ತೇವೆ. ಇದರಲ್ಲಿ ಮೂರು ತಿಂಗಳ ಅವಧಿ

ರೂರಲ್ ಪೋಸ್ಟಿಂಗ್ ಎಂದು ಇರುತ್ತದೆ. ಆದರೆ, ಈ ಅವಧಿಯಲ್ಲಿ ಸಾಧಾರಣವಾಗಿ ನಗರ ಪ್ರದೇಶಗಳಲ್ಲಿ ಹತ್ತಿರ ಇರತಕ್ಕಂಥ ಕೆಲವು ಆಸ್ಪತ್ರೆಗಳಿಗೆ ಹಾಕುತ್ತಾರೆ. ಆದ್ದರಿಂದ ರೂರಲ್ ಪೋಸ್ಟಿಂಗ್ ಅವಧಿಯಲ್ಲಿ ಆದಷ್ಟು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸುವಂಥ ವ್ಯವಸ್ಥೆ ಕಡೆಗೆ ಸರ್ಕಾರ ಗಮನಹರಿಸಬೇಕು. ಏಕೆಂದರೆ ಈ ಮೂರು ತಿಂಗಳ ಅವಧಿಯಲ್ಲಿ ಅಲ್ಲಿ ಇಲ್ಲಿ ಹೋಗಿ ಸುಮ್ಮನೆ ಕಾಲಹರಣ ಮಾಡುತ್ತಾರೆ. ಹಾಗೆಯೇ ಸರ್ಕಾರಿ ಸೀಟ್‌ಗಳನ್ನು ನಾವೇನು ಖಾಸಗಿ ಕಾಲೇಜುಗಳಿಗೆ ಕೊಡುತ್ತೇವೆಯೋ ಅಲ್ಲಿಯೂ ಕೂಡ ಈ ನಿರ್ಬಂಧವನ್ನು ಹಾಕಬಹುದು. ಅದೇನೆಂದರೆ, ಮೂರು ತಿಂಗಳ ಅವಧಿಯವರೆಗೆ ರೂರಲ್ ಪೋಸ್ಟಿಂಗ್ ಮಾಡತಕ್ಕಂಥದ್ದನ್ನು ಕಡ್ಡಾಯವಾಗಿ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಿಗೆ ನೀವೇ ನಿಯೋಜನೆ ಮಾಡಬೇಕೆಂದು ಹೇಳಬೇಕು. ಈ ರೀತಿಯಾದಾಗ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವಂಥ ವೈದ್ಯರು ಸಿಗುತ್ತಾರೆ. ಮತ್ತೊಂದು ಏನೆಂದರೆ ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಅಥವಾ ಎರಡು ವರ್ಷ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವಂತಾಗಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಛೇರ್ಮನ್‌ರವರೆ, ಹಿರಿಯರಾಗಿರತಕ್ಕಂಥ ಮಾನ್ಯ ಶ್ರೀನಿವಾಸಗೌಡರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಏನೆಂದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಹಾಜರಾತಿ ಇರಬೇಕಾದರೆ ಏನು ಮಾಡಬೇಕೆಂಬುದರ ಬಗ್ಗೆ ತಾವು ಹೇಳಿರತಕ್ಕಂಥ ಸಲಹೆಯನ್ನು ನಾವು ಸ್ವೀಕಾರ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ನಾನು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಸರ್ಕಾರದ ಖರ್ಚಿನಲ್ಲಿ ಪಿ.ಜಿ. ಕೋರ್ಸ್ ಮಾಡತಕ್ಕಂಥವರಿಗೆ ಸರ್ಕಾರದ ಕಡೆಯಿಂದ ಅವರಿಗೆ ಸುಮಾರು 15 ರಿಂದ 20 ಲಕ್ಷ ರೂಪಾಯಿ ವಿನಿಯೋಗ ಮಾಡಲಾಗುತ್ತದೆ. ಆದ್ದರಿಂದ ಅವರು ಜನರ ಪರವಾಗಿ ಕೆಲಸ ಮಾಡತಕ್ಕಂಥದ್ದು ಅವರ ಕರ್ತವ್ಯವೆಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ತಾವು ಮತ್ತು ಡಾ: ಸುಧಾಕರ್‌ರವರು ನೀಡಿರತಕ್ಕಂಥ ಸಲಹೆಗಳೆರಡನ್ನು ನಾವು ಸ್ವೀಕಾರ ಮಾಡಿದ್ದು, ಮುಂದೆ ಬರತಕ್ಕಂಥ ದಿನಗಳಲ್ಲಿ ಎಂಬಿಬಿಎಸ್ ಮತ್ತು ಪಿ.ಜಿ. ಮಾಡತಕ್ಕಂಥ ಡಾಕ್ಟರ್‌ಗಳಿಗೆ ಸಂಬಂಧಪಟ್ಟಂತೆ ಒಂದು ಬಿಲ್‌ನ್ನು ಈ ಸದನದಲ್ಲಿ ತರಲಾಗುತ್ತದೆ. ಮತ್ತೆ ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಇಸ್ರೇಲ್‌ನಲ್ಲಿ ಮತ್ತು ಸಿಂಗಾಪುರ ಹಾಗೂ ಬೇರೆ ದೇಶಗಳಲ್ಲಿ ಮಿಲ್ಟಿಯಲ್ಲಿ 10 ಅಥವಾ 5 ವರ್ಷ ಕಡ್ಡಾಯವಾಗಿ ಕೆಲಸ ಮಾಡಬೇಕೆಂದು ನಿಬಂಧನೆ ಇದೆ. ಆದ್ದರಿಂದ ಸರ್ಕಾರಿ ಕಾಲೇಜುಗಳಲ್ಲಿ ಫ್ರೀ ಸೀಟ್ ತೆಗೆದುಕೊಂಡು ಓಡತಕ್ಕಂಥ ಡಾಕ್ಟರ್‌ಗಳು ಮತ್ತು ಫ್ರೀ ಸೀಟ್ ತೆಗೆದುಕೊಂಡು ಪಿ.ಜಿ. ಮಾಡತಕ್ಕಂಥ ಡಾಕ್ಟರ್‌ಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಎರಡು ಅಥವಾ ಮೂರು ವರ್ಷ ಕೆಲಸ ಮಾಡಬೇಕೆಂದು ನಿಬಂಧನೆ ಮಾಡುವುದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಮತ್ತೆ ಅವರ ಸ್ಟಡಿಗೆ ಸರ್ಕಾರದ ಕಡೆಯಿಂದ ಹಣ ಕೊಡುವುದಲ್ಲದೆ ಅವರಿಗೆ ಸ್ಟೈಫಂಡರಿ ಕೂಡ ಕೊಡುತ್ತೇವೆ. ಆದ್ದರಿಂದ ಅವರು ಕಡ್ಡಾಯವಾಗಿ ಕೆಲಸ ಮಾಡಬೇಕೆಂದು ಮಾಡಿದರೆ ನಮ್ಮ ಎಲ್ಲಾ ಆಸ್ಪತ್ರೆಗಳಲ್ಲಿ ನಿಜಕ್ಕೂ ವೈದ್ಯರ ಕೊರತೆ ಬರುವುದಿಲ್ಲ ಎನ್ನತಕ್ಕಂಥ ನಿಮ್ಮಗಳ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಛೇರ್ಮನ್‌ರವರೆ, ಇಸ್ರೇಲ್ ಪ್ಯಾಟರ್ನ್ ತರಹ ಇಲ್ಲಿ ಮಾಡಬೇಕೆಂದರೆ ಅಮೇರಿಕಾ ಪ್ಯಾಟರ್ನ್ ನೋಡಿ ಇಲ್ಲಿ ಮಾಡಬಾರದೆ? ಮಿಕ್ಕವೆಲ್ಲವೂ ಕೂಡ ಇಸ್ರೇಲ್ ಮತ್ತು ಸಿಂಗಾಪುರ ಪ್ಯಾಟರ್ನ್. ರೋಡ್ ಮಾಡುವುದಕ್ಕೆ ಅಮೇರಿಕಾ ಪ್ಯಾಟರ್ನ್ ಎಂದರೆ ಅದಕ್ಕೆ ಅಬ್ಜಕ್ಷನ್ ಮಾಡುತ್ತಾರೆ. ಇದೆಂಥ ನ್ಯಾಯ?

ಛೇರ್ಮನ್ : ಜಯಪ್ರಕಾಶ್ ಹೆಗಡೆಯವರೇ, ಈಗ ನಿಮ್ಮ ಪ್ರಶ್ನೆ ಇದೆ. ತಾವು ಕೇಳಿ.

ಉಡುಪಿ ತಾಲ್ಲೂಕಿನಲ್ಲಿರುವ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

179 (796) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ;

ಆ) ಹಾಗಿದ್ದಲ್ಲಿ, ಎಲ್ಲೆಲ್ಲಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು)?

ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಪಶು ಆಸ್ಪತ್ರೆಗಳನ್ನು ಮೇಲ್ದಜೆಗೇರಿಸುವ ಕಾರ್ಯಕ್ರಮ ಇರುವುದಿಲ್ಲ. ಆದರೆ ಸರ್ಕಾರಿ ಆದೇಶ ಸಂಖ್ಯೆ ಪಸಂಮೀ 61 ಪಸಸೆ 2004 ದಿನಾಂಕ: 28–12–2005 ರಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಯಲಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಅನ್ವಯಿಸುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಛೇರ್ಮನ್‌ರವರೆ, ನಾನು ಪ್ರಶ್ನೆಯನ್ನು ಕೇಳುವುದಕ್ಕಿಂತ ಮೊದಲು ನನ್ನದೊಂದು ಸಬ್‌ಮಿಷನ್ ನಿಮಗೆ ಇದೆ. ಈ ರೀತಿಯಾಗಿ ಪ್ರಶ್ನೋತ್ತರ ವೇಳೆಯನ್ನು ನಡೆಸುವುದು ಸರಿಯಲ್ಲ. ಯಾರು ಪ್ರಶ್ನೆ ಕೇಳಿದ್ದಾರೆ ಅವರ ತಾಲ್ಲೂಕಿಗೆ ಸೀಮಿತವಾಗುವಂತೆ ಉತ್ತರ ಕೊಡಿಸಿ. ಆದ್ದರಿಂದ ಬೇರೆಯವರೆಲ್ಲಾ ಕೇಳುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಈ ರೀತಿಯಾದರೆ ಪ್ರಶ್ನೋತ್ತರ ವೇಳೆಯನ್ನು ಎರಡು–ಮೂರು ಗಂಟೆಯವರೆಗೆ ನಡೆಸಿದರೂ ಸರಿಯಾಗುವುದಿಲ್ಲ. ಯಾರು ಪ್ರಶ್ನೆ ಕೇಳಿದ್ದಾರೆ ಆ ಸದಸ್ಯರು ಕೇಳತಕ್ಕಂಥ ಉಪ ಪ್ರಶ್ನೆಗೆ ಮತ್ತು ಅವರು ತಾಲ್ಲೂಕಿಗೆ ಸೀಮಿತವಾಗಿರುವ ಪ್ರಶ್ನೆಗೆ ಉತ್ತರ ಕೊಡಿಸಬೇಕು. ಇಡೀ ರಾಜ್ಯದ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡಬೇಡಿ. ಮತ್ತೆ ಮಂತ್ರಿಗಳೂ ಕೂಡ ಎಲ್ಲದಕ್ಕೂ ಉತ್ತರ ಹೇಳುತ್ತಾ ಹೋದರೆ ಸಮಯ ಕೂಡ ವ್ಯಯವಾಗುತ್ತದೆ. ಆದ್ದರಿಂದ ಇನ್ನು ಮುಂದೆ ಉತ್ತರವನ್ನು ಸ್ವಲ್ಪ ಬ್ರೀಫ್ ಆಗಿ ಹೇಳತಕ್ಕಂಥದ್ದನ್ನು ಮಂತ್ರಿಗಳು ಮಾಡಬೇಕು. ಇದನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಆದ್ದರಿಂದ ಇದನ್ನು ಮಾನ್ಯ ಸಭಾಧ್ಯಕ್ಷರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನನ್ನ ಪ್ರಶ್ನೆ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಓದಿಸಿದ್ದಾರೆ. ಅವರು ನೀಡಿರತಕ್ಕಂಥ ಉತ್ತರವನ್ನು ಓದಿ ಹೇಳಿದರೆ ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.